## ಕರ್ನಾಟಕ ರಾಜ್ಯ ಪೊಲೀಸ್
## ಬೆಂಗಳೂರು ಜಿಲ್ಲೆ, ಆನೇಕಲ್ ಉಪ–ವಿಭಾಗ.
## ಹೆಬ್ಬಗೋಡಿ ಪೊಲೀಸ್ ಠಾಣೆ.

### ಪತ್ರಿಕಾ ಪ್ರಕಟಣೆ

**ಕುಖ್ಯಾತ ಬೈಕ್ ಕಳ್ಳರ ಬಂಧನ, ಬಂಧಿತ ಕಳ್ಳರಿಂದ ಸುಮಾರು 14 ಲಕ್ಷ ಮೌಲ್ಯದ 15 ದ್ವಿಚಕ್ರ ವಾಹನಗಳ ವಶ.**

ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಾತ್ರಿ ವೇಳೆಯಲ್ಲಿ ಮನೆಗಳ ಮುಂದೆ ನಿಲ್ಲಿಸುತ್ತಿದ್ದ, ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಗಳನ್ನು ಬಂಧಿಸಿ ಸುಮಾರು 14 ಲಕ್ಷ ಮೌಲ್ಯದ 15 ದ್ವಿಚಕ್ರ ವಾಹನಗಳನ್ನು ಹೆಬ್ಬಗೋಡಿ ಪೊಲೀಸರು ವಶಪಡಿಸಿಕೊಂಡಿರುತ್ತಾರೆ.

**ಆರೋಪಿಗಳ ವಿವರ:**

1) ತಿರುವೆಂಗಡಂ ಬಿನ್ ಶಂಕರ್, ಚಿನ್ನವೆಪ್ಪಂಬಟ್ಟು, ತಿರುಪತ್ತೂರು ಜಿಲ್ಲೆ, ತಮಿಳುನಾಡು.
2) ಸಂತೋಷ್ @ ಸುಂಡುಂ ಬಿನ್ ಸುರೇಶ್‌ಕುಮಾರ್, ಚಿನ್ನವೆಪ್ಪಂಬಟ್ಟು, ತಿರುಪತ್ತೂರು ಜಿಲ್ಲೆ, ತಮಿಳುನಾಡು.
3) ರಾಘವನ್ ಶಂಕರ್ @ ವಿಷ್ಣು ಬಿನ್ ಶಂಕರ್ ಸುಬ್ರಮಣಿ, ಚಿನ್ನವೆಪ್ಪಂಬಟ್ಟು, ತಿರುಪತ್ತೂರು ಜಿಲ್ಲೆ, ತಮಿಳುನಾಡು.

ಈ ಮೇಲ್ಕಂಡ ಆರೋಪಿಗಳನ್ನು ಬಂಧಿಸಿ ಅಧಿಕ ಬೆಲೆಯ ವಿವಿಧ 6 ಮಾದರಿಯ ರಾಯಲ್ ಎನ್‌ಫೀಲ್ಡ್ ಬುಲೆಟ್, ಹೊಂಡಾ ಆಕ್ಟಿವ ಬೈಕ್, ಡ್ಯುಯೊ ಬೈಕ್, ಪಲ್ಸರ್ ಬೈಕ್, ಶೈನ್ ಬೈಕ್ ಸೇರಿದಂತೆ ಒಟ್ಟು 14 ಲಕ್ಷ ಮೌಲ್ಯದ 15 ಬೈಕ್‌ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಹೆಬ್ಬಗೋಡಿ ಪೊಲೀಸ್ ಠಾಣೆಯ ಒಟ್ಟು 15 ಪ್ರಕರಣಗಳು ಪತ್ತೆಯಾಗಿರುತ್ತವೆ.

ಆರೋಪಿಗಳ ಪತ್ತೆಗಾಗಿ ಬೆಂಗಳೂರು ಜಿಲ್ಲೆಯ ಎಸ್.ಪಿ. ಸಾಹೇಬರಾದ ಶ್ರೀ ಡಾ. ವಂಶಿಕೃಷ್ಣ, ಐಪಿಎಸ್ ಹಾಗೂ ಅಡಿಷನಲ್ ಎಸ್.ಪಿ. ಶ್ರೀ ಲಕ್ಷ್ಮೀಗಣೇಶ್, ಕೆ.ಎಸ್.ಪಿ.ಎಸ್. ರವರ ಮಾರ್ಗದರ್ಶನದಲ್ಲಿ ಆನೇಕಲ್ ಡಿವೈ.ಎಸ್.ಪಿ. ಶ್ರೀ ಮಲ್ಲೇಶ್ .ಎಂ. ರವರ ನೇತೃತ್ವದಲ್ಲಿ ಹೆಬ್ಬಗೋಡಿ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀ ಜಗದೀಶ್, ವೆಂಕಟೇಶ್ ಪಿಎಸ್‌ಐ ಮತ್ತು ಸಿಬ್ಬಂದಿಯವರು ಆರೋಪಿಗಳನ್ನು ಬಂಧಿಸಿರುತ್ತಾರೆ.